Single/Two Cover System

# ಕಾರ್ಯಪಾಲಕ ಅಭಿಯಂತರರು (ಯೋಜನೆ)

**ಬಿಬಿಎಂಪಿ, ಮಹದೇವಪುರ ವಲಯ.ಕೆ.ಆರ್.ಪುರ, ಬೆಂಗಳೂರು-36**

ಸಂಖ್ಯೆ : ಬಿಬಿಎಂಪಿ/ಕಾ.ಅ(ಯೋ)/ಮ.ವ/ಕೆ.ಆರ್/.31/2024-25 ದಿನಾಂಕ:26-07-2024

**ವಿಷಯ:** ಕೆ.ಆರ್.ಪುರಂ ಸಂತೆ ಮೈದಾನದಲ್ಲಿ ನಡೆಯುವ ವಾರದ ಸಂತೆ ಸುಂಕ ಮತ್ತು ದಿನ ವಹಿ ಸಂತೆ ಸುಂಕವನ್ನು ಒಂದು ವರ್ಷದ ಅವಧಿಗೆ ಸುಂಕ ವಸೂಲಾತಿ ಮಾಡುವ ಬಗ್ಗೆ.

## -: KPPportal (ಇ-ಪಕ್ಯೂಮೆಂಟ್) ಹರಾಜು ಇಸ್ತಿಹಾರದ ಪ್ರಕಟಣೆ :

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಳಕಂಡ ಬಾಬ್ತುಗಳನ್ನು 2024-25ನೇ ಸಾಲಿನ ಆಯಾ ಬಾಬ್ತುಗಳ ಮುಂದೆ ನಮೂದಿಸಿರುವ ದಿನಾಂಕದಂದು ವಿಶೇಷ ಆಯುಕ್ತರು ಬಿಬಿಎಂಪಿ(ಮಾರುಕಟ್ಟೆ) ರವರ ಮೂಲ ಕಡತದಲ್ಲಿ ನೀಡಿರುವ ನಿರ್ದೇಶನದಂತೆ ಟೆಂಡರ್ ಪ್ರಕ್ರಿಯೆ ನಡೆಸುತ್ತಿದ್ದು, ಇಚ್ಚೆ ಉಳ್ಳವರು KPPportal (ಇ-ಪ್ರಕ್ಯೂರ್‌ಮೆಂಟ್) ಹರಾಜಿನಲ್ಲಿ ಭಾಗವಹಿಸಿ KPPportal ನಲ್ಲಿ ಇ-ಹರಾಜು ಷರತ್ತಿಗೊಳಪಟ್ಟು ಬಾಬ್ತುಗಳನ್ನು ರೂಢಿಸಿಕೊಳ್ಳಬಹುದಾಗಿರುತ್ತದೆ. KPPportal ಹರಾಜು ಷರತ್ತುಗಳನ್ನು ಇನ್ನಿತರೆ ವಿವರಗಳನ್ನು ಕಛೇರಿ ವೇಳೆಯಲ್ಲಿ ಕೆ.ಆರ್.ಪುರ ಕಂದಾಯ ಶಾಖೆಯಲ್ಲಿ ಪಡೆಯಬಹುದಾಗಿರುತ್ತದೆ.

ಇ-ಹರಾಜನ್ನು ತೆರೆಯುವ ಆರಂಭಿಕ ದಿನಾಂಕ: 29-07-2024 ಸಮಯ: 4:00 PM

ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಕೊನೆಯ ದಿನಾಂಕ: 12-08-2024 ಸಮಯ: 16:30 PM

ಇ-ಹರಾಜಿನ ತಾಂತ್ರಿಕ ಬಿಡ್ಡಿಂಗ್ ಕೊನೆಯ ದಿನಾಂಕ: 13-08-2024 ಸಮಯ: 16:30 PM

ಇ-ಹರಾಜಿನ ಆರ್ಥಿಕ ಬಿಡ್ಡಿಂಗ್ ಕೊನೆಯ ದಿನಾಂಕ: 14-08-2024 ಸಮಯ: 16:30 PM

**ಆರಂಭಿಕ ಬಿಡ್ ದರ ಪ್ರತಿ ಮಾಹೆಗೆ ರೂ.5.95 ಲಕ್ಷಗಳು.**

- ವಾರದ ಸಂತೆ ಅಥವಾ ದಿನವಹಿ ಮಾರುಕಟ್ಟೆ ದರಗಳನ್ನು ಚದರ ಅಡಿಗೆ ರೂ.11.00 ರಂತೆ ಪ್ರತಿ ತಿಂಗಳು/ಮಾಹೆಗೆ ಸುಂಕ ನಿಗದಿಪಡಿಸಲಾಗಿದೆ.

**-:ಷರತ್ತುಗಳು:-**

1. ಬಾಕಿದಾರರು ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.
2. ಹರಾಜಿನಲ್ಲಿ ಭಾಗವಹಿಸುವವರು ವಾರದ ಸಂತೆ ಸುಂಕ ಮತ್ತು ಪ್ರತಿದಿನ ಮಾರುಕಟ್ಟೆ ಸುಂಕದ ಠೇವಣಿ ಹಣವಾದ (ಇ.ಎಂ.ಡಿ) **ರೂ.1.30 ಲಕ್ಷವನ್ನು** KPPportalನಲ್ಲಿ ಸಲ್ಲಿಸತಕ್ಕದ್ದು.
3. ವಾರದ ಸಂತೆ ಅಥವಾ ದಿನವಹಿ ಮಾರುಕಟ್ಟೆ/ಮಟ್‌ಫಾತ್ ಸ್ಥಳಾಂತರಗೊಂಡಲ್ಲಿ ಪಾಲಿಕೆಯು ಕೈಗೊಳ್ಳುವ ತೀರ್ಮಾನಕ್ಕೆ ಬದ್ಧರಾಗಿರತಕ್ಕದ್ದು.

Scanned with OKEN Scanner

4. ಸುಂಕವನ್ನು ಕೊಡತಕ್ಕವರೆಗೆ ಸುಂಕ ಪಾವತಿ ಮಾಡಲ್ಪಟ್ಟ ದಿನಾಂಕ ಮತ್ತು ಮೊಬಲಗು ನಮೂದಿಸಬೇಕು ಇಂತಹ ರಶೀದಿ ಪುಸ್ತಕಗಳನ್ನು ತಮ್ಮ ಸ್ವಂತ ಖರ್ಚಿನಿಂದ ಮಾಡಿಸತಕ್ಕದ್ದು. ಲೆಕ್ಕ ಚೆಕ್ ಮಾಡಿಸಲು ಅನುಕೂಲಿಸುವಂತೆ ಕೌಂಟರ್ ಫೈಲ್ ರಶೀದಿಗಳನ್ನು ಪಾಲಿಕೆಯ ಅಧಿಕಾರಿ ಸಿಬ್ಬಂದಿಗಳು ಕೇಳಿದಾಗ ಹಾಜರುಪಡಿಸಬೇಕು.
5. ಯಾವ ಕಾರಣದಿಂದಾಗಲಿ ಖಿಸ್ತಿಗೆ ಕಮಿಷನ್ ಆಗಲೀ ಅಥವಾ ಇತರೇ ಪರಿಹಾರವನ್ನಾಗಲೀ ನೀಡಲಾಗುವುದಿಲ್ಲ.
6. ಅಖೈರು ಬಿಡ್‌ದಾರರು ಪಾಲಿಕೆಯ ರೂಲ್ಸ್ ಮಂಜೂರಾದ ಬೈಲಾಗಳಿಗೆ ಬದ್ಧವಾಗಿರಬೇಕು ಮತ್ತು ಪಾಲಿಕೆಯ ಅಧಿಕಾರಿಗಳು ಮಾಡಿದ ತೀರ್ಮಾನದಂತೆ ನಡೆದುಕೊಳ್ಳಬೇಕು.
7. ಮಂಜೂರಾಗುವ ಸುಂಕದ ದರವನ್ನು ತೋರಿಸುವ ತಪಸೀಲು ಲಿಷ್ಟನ್ನು ಕನ್ನಡ ಮತ್ತು ಇಂಗ್ಲೀಷಿನಲ್ಲಿ ಸ್ಪಷ್ಟವಾಗಿ ತನ್ನ ಸ್ವಂತ ಖರ್ಚಿನಿಂದ ಬರೆದು ಬಹಿರಂಗವಾಗಿ ಸಂತೆ ಬಳಿ ಇಡತಕ್ಕದ್ದು.
8. ರೆಗ್ಯೂಲೇಟೆಡ್ ಮಾರ್ಕೆಟ್ ಪರಿಮಿತಿಗೊಳಪಟ್ಟ ಮಾರ್ಕೆಟ್ ಆವರಣದಲ್ಲಿ ಮಾರಾಟವಾಗುತ್ತಿರುವ ಸರಕುಗಳ ಮೇಲೆ ನೆಲ ಬಾಡಿಗೆಯನ್ನು ವಸೂಲು ಮಾಡುವ ಹಕ್ಕು ಅಖೈರ್ ಬಿಡ್‌ದಾರರಿಗೆ ಇರುವುದಿಲ್ಲ, ಆದರೆ ಸರಕು ಅಥವಾ ಸಾಮಾನುಗಳೇನಾದರೂ ಸಂತೆ ಆವರಣದಲ್ಲಿ ಮಾರಲ್ಪಟ್ಟರೆ ಮಾತ್ರ ಅಖೈರ್ ಬಿಡ್‌ದಾರರಿಗೆ ಸುಂಕ ವಸೂಲಿ ಮಾಡಲು ಹಕ್ಕಿರುತ್ತದೆ.
9. ಮೇಲ್ಕಂಡ ಯಾವುದೇ ಷರತ್ತುಗಳನ್ನು ಮಾರ್ಪಾಡು ಮಾಡುವ ಅಥವಾ ರದ್ದು ಮಾಡುವ ಅಧಿಕಾರವನ್ನು ಪಾಲಿಕೆಯು ಹೊಂದಿರುತ್ತದೆ.
10. ದಿನನಿತ್ಯ ಮಾರುಕಟ್ಟೆ ವಸೂಲಾತಿಯನ್ನು ರಸ್ತೆ ಬದಿ ಅಂಗಡಿ ಇಡುವುದರಿಂದ ವಸೂಲಿ ಮಾಡತಕ್ಕದ್ದು.
11. ಮುಷ್ಕರ, ಕರ್ನಾಟಕ ಬಂದ್, ಭಾರತ ಬಂದ್, ಅಥವ ಇತರೆ ದಿಢೀರ್ ಬೆಳವಣಿಗೆಗಳಿಗೆ ಪಾಲಿಕೆಯು ಜವಾಬ್ದಾರಿಯಲ್ಲ ಮತ್ತು ಆ ದಿನದಂದಿನ ವಸೂಲಾತಿಯನ್ನು ಮುಂದಿನ ದಿನಗಳಿಗೆ ಮುಂದುವರೆಸುವುದಿಲ್ಲ.
12. ಅಖೈರು ಬಿಡ್‌ದಾರರು ಇ–ಪ್ರಕ್ಯೂರ್‌ಮೆಂಟ್ ಹರಾಜು ಅಖೈರ್‌ರಾದ ಕೂಡಲೇ ಪೂರ್ಣ ವಿಳಾಸ ಮತ್ತು ಭಾವಚಿತ್ರವನ್ನು ಪಾಲಿಕೆಗೆ ನೀಡತಕ್ಕದ್ದು.
13. ನ್ಯಾಯಾಲಯದ ಅಂತಿಮ ತೀರ್ಮಾನಕ್ಕೆ ಒಳಪಟ್ಟಿದೆ.
14. ಹರಾಜನ್ನು ಪಾಲಿಕೆಯು ಯಾವುದೇ ಕಾರಣ ನೀಡದೇ ಅಂಗೀಕರಿಸುವ, ತಿರಸ್ಕರಿಸುವ ಹಾಗೂ ಮುಂದೂಡುವ ಹಕ್ಕನ್ನು ಕಾಯ್ದಿರಿಸಿದೆ.
15. ಬಿಡ್‌ದಾರರು ಚಾಲ್ತಿಯಲ್ಲಿರುವ/ಚಾಲ್ತಿಯ ಸಾಲಿನಲ್ಲಿ ಬರಬಹುದಾದ ಕಾನೂನು ನಿಯಮಾವಳಿಗೆ ಬದ್ಧರಾಗಿರತಕ್ಕದ್ದು. ತಪ್ಪಿದ್ದಲ್ಲಿ ಹರಾಜಿನಲ್ಲಿ ಪಡೆದಿರುವ ಹಕ್ಕನ್ನು ಬಿಬಿಎಂಪಿ ಪಾಲಿಕೆಯ ವಶಕ್ಕೆ ಪಡೆಯಲಾಗುವುದು.
16. ಬಾಬ್ತುಗಳ ಸುಂಕದ ದರವನ್ನು ಪರಿಷ್ಕರಿಸುವ ಅಧಿಕಾರವನ್ನು ಪಾಲಿಕೆಯು ಕಾಯ್ದಿರಿಸಿಕೊಂಡಿರುತ್ತದೆ.

Scanned with OKEN Scanner

17. ಅಖೈರು ಬಿಡ್‌ದಾರರು ಷೆಡ್ಯೂಲ್‌ನಲ್ಲಿ ಇರುವ ದರಗಳು ಒಂದು ವೇಳೆ ಹರಾಜಿನ ಅವಧಿಯಲ್ಲಿ ಪಾಲಿಕೆಯು ದರಗಳನ್ನು ಪರಿಷ್ಕರಿಸಿದ್ದಲ್ಲಿ ಪರಿಷ್ಕರಿಸಿದ ದರಗಳಂತೆ ಮಾರ್ಪಡಿಸಿ ಷೆಡ್ಯೂಲ್ ದರಗಳನ್ವಯ ಬಿಡ್ ಮಾಡುವುದು.

18. ವಾರದ ಸಂತೆ ಅಥವಾ ದಿನವಹಿ ಮಾರುಕಟ್ಟೆ ದರಗಳನ್ನು ಚದರ ಅಡಿಗಳಲ್ಲಿ ಸುಂಕ ನಿಗದಿಪಡಿಸಲಾಗಿದ್ದು, ಒಂದು ಚದರ ಅಡಿ ರೂ.11.00 ಕ್ಕೆ ತಿಂಗಳು/ಮಾಹೆಗೆ ಸುಂಕ ನಿಗದಿಪಡಿಸಲಾಗಿದೆ.

ಕಾರ್ಯಪಾಲಕ ಅಭಿಯಂತರರು,
ಯೋಜನಾ ವಿಭಾಗ, ಮಹದೇವಪುರ ವಲಯ,
ಬಿಬಿಎಂಪಿ, ಬೆಂಗಳೂರು.

**ಪ್ರತಿಯನ್ನು:**

1. ಜಂಟಿ ಆಯುಕ್ತರು ಮಹದೇವಪುರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು ಮಹದೇವಪುರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಸಹಾಯಕ ಹಣಕಾಸು ನಿಯಂತ್ರಕರು, ಮಹದೇವಪುರ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ವಲಯಗಳ ಕಂದಾಯ ಅಧಿಕಾರಿ/ಸಹಾಯಕ ಕಂದಾಯ ಅಧಿಕಾರಿ (ಮಾರುಕಟ್ಟೆ)ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ಕಛೇರಿ ಪ್ರತಿ.

Scanned with OKEN Scanner